ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇದು ನನ್ನ ಖಾತೆಗೆ ಸಂಬಂಧಪಟ್ಟಂತೆ ತಪ್ಪಾಗಿ ಆಚ್ಚಾಗಿದೆ. ಇದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಗೆ ಸೇರಿದ್ದು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವರ ಪರವಾಗಿ ನಾನು ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಆಗಬಹುದು.

ವಿಷಯ : ಕಾರದಗಾ ಹಾಗೂ ಭೋಜಗಳಲ್ಲಿ ಕುಡಿಯುವ ನೀರಿನ ಯೋಜನೆ.

ಪ್ರ. 243 (175) ಶ್ರೀ ಎ. ಎ. ನಿಂಬಾಳ್ಕರ್ (ಸಾದಲಗ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಸರ್ಕಾರವು ಕಾರದಗಾ ಹಾಗೂ ಭೋಜ ಗ್ರಾಮಗಳಿಗೆ ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳುವುದೇ ;

(ಆ) ಈ ಯೋಜನೆಗಳನ್ನು ಮುಗಿಸಲು ಬೇಕಾಗುವ ಸಂಭವನೀಯ ಅವಧಿ ;

(ಇ) ಮಂಗಳೂರು ಹಾಗೂ ಯಡೂರು ನೀರು ಸರಬರಾಜು ಯೋಜನೆಗಳ ವಿವರಗಳು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ).—

(ಅ) ಹೌದು.

(ಆ) ಕಾರದಗಾ ಯೋಜನೆಯನ್ನು ಮುಗಿಸಲು 3 ವರ್ಷಗಳು ಹಾಗೂ ಭೋಜ ಯೋಜನೆಯನ್ನು ಮುಗಿಸಲು 2 ವರ್ಷಗಳ ಸಂಭವನೀಯ ಅವಧಿ ಬೇಕು.

(ಇ) ಯಡೂರು ನೀರು ಸರಬರಾಜು ಯೋಜನೆ: ನೇರವಾಗಿ ಪಂಪು ಮಾಡಿ ಗ್ರಾಮಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ. ಉನ್ನತ ಮಟ್ಟದ ಜಲಾಶಯದ ಕೆಲಸವನ್ನು ಇನ್ನೂ ಪ್ರಾರಂಭಿಸಬೇಕಾಗಿದೆ. ಮಂಗೂರು ನೀರು ಸರಬರಾಜು ಯೋಜನೆ: ನೇರವಾಗಿ ಪಂಪು ಮಾಡಿ ಗ್ರಾಮಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ. ಉನ್ನತ ಮಟ್ಟದ ಜಲಾಶಯದ ಕೆಲಸವನ್ನು ಇನ್ನೂ ಪ್ರಾರಂಭಿಸಬೇಕಾಗಿದೆ.

SRI. A. A. NIMBALKAR.—Hon'ble Speaker, Sir, may I know when will the construction work starts in Karadaga and Bhoj ?

SRI. M. P. PRAKASH.—The works will commence this year. We have allotted Rs. 1,000/- for this purpose.

[ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಇದಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ ಹೇಗೆ ? ಇದು ಆ ಜಾಗವನ್ನು ಶುಚಿ ಮಾಡುವುದಕ್ಕೂ ಸಹ ಸಾಕಾಗುವುದಿಲ್ಲ.

(ಉತ್ತರವಿಲ್ಲ)]

ವಿಷಯ : ಚಿಕ್ಕಮಾರನಹಳ್ಳಿಯಲ್ಲಿ ಮನೆಗಳನ್ನು ಕೆಡವಿರುವುದು.

ಪ್ರ. 244 (190) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಚಿಕ್ಕಮಾರನಹಳ್ಳಿಯಲ್ಲಿ ಇತ್ತೀಚೆಗೆ ಬುಲ್‌ಡೋಜರ್ಸ್ ಮೂಲಕ ಮನೆಗಳನ್ನು ಕೆಡವಲು ಕಾರಣಗಳೇನು ;

(ಆ) ಈ ಹಳ್ಳಿಯಲ್ಲಿ ಎಷ್ಟು ಮನೆಗಳನ್ನು ಕೆಡವಲಾಯಿತು :

(ಇ) ಈ ಕೆಡವಿದ ಮನೆಗಳ ಮೌಲ್ಯವೆಷ್ಟು ;

(ಈ) ಈ ಹಳ್ಳಿಯಲ್ಲಿ ಮನೆ ಕಳೆದುಕೊಂಡಿರುವವರಿಗೆ ಮತ್ತು ನಿವೇಶನಗಳನ್ನು ಕಳೆದುಕೊಂಡವರಿಗೆ ಸರಕಾರದವರು ಪರಿಹಾರ ನೀಡಲು ತೀರ್ಮಾನಿಸಿದ್ದಾರೆಯೇ ?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

(ಅ) ಚಿಕ್ಕಮಾರನಹಳ್ಳಿ–ಮತ್ತೀಕೆರೆ ಗ್ರಾಮದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನಗಳನ್ನು ಹಂಚಲು ಭೂಸ್ವಾಧೀನಪಡಿಸಿಕೊಂಡಿದೆ. ಪ್ರಾಧಿಕಾರದ ಆಸ್ತಿಯಲ್ಲಿ ಹಲವಾರು ಮಂದಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿದ್ದುದರಿಂದ ಅನಧಿಕೃತ ಕಟ್ಟಡಗಳನ್ನು ತೆಗೆಯಲು ಕಾನೂನು ಮೇರೆಗೆ ಕ್ರಮ ಕೈಗೊಳ್ಳಲಾಯಿತು.

(ಆ) 74 ಮನೆಗಳನ್ನು ಕೆಡವಲಾಯಿತು.

(ಇ) ಮೌಲ್ಯವನ್ನು ಅಂದಾಜು ಮಾಡಿರುವುದಿಲ್ಲ.

(ಈ) ಅಧಿಸೂಚನೆಗೊಳಪಟ್ಟ ಪ್ರದೇಶದಲ್ಲಿ ಕಟ್ಟಡಗಳನ್ನು ಕಟ್ಟಿರುವ ಜನರು ಅತಿಕ್ರಮಣಗಾರರಾಗಿರುವುದರಿಂದ ಪರಿಹಾರ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ರಾಮ್‌ದೇವ್ .—ಇಲ್ಲಿ ನನ್ನ ಮೊದಲ ಪ್ರಶ್ನೆಗೆ ಉತ್ತರವಾಗಿ ಪ್ರಾಧಿಕಾರದ ಆಸ್ತಿಯಲ್ಲಿ ಹಲ ವಾರು ಮಂದಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿದ್ದುದರಿಂದ ಅನಧಿಕೃತ ಕಟ್ಟಡಗಳನ್ನು ತೆಗೆಯಲು ಕಾನೂನು ಮೇರೆಗೆ ಕ್ರಮ ಕೈಗೊಳ್ಳಲಾಯಿತೆಂದು ಹೇಳಿದ್ದೀರಿ; ಇದೇ ರೀತಿಯಲ್ಲಿ ಬೆಂಗಳೂರಿನ ಬೇರೆ ಬೇರೆ ಭಾಗ ಗಳಲ್ಲಿರುವ ಸರ್ಕಾರದ ಜಮೀನಿನ ಮೇಲೆ, ಕೇಂದ್ರ ಸರ್ಕಾರದ ಜಮೀನಿನ ಮೇಲೆ, ಕಾರ್ಪೊರೇಷನ್ ಜಮೀನಿನ ಮೇಲೆ ಅನಧಿಕೃತವಾಗಿ ಮನೆಗಳನ್ನು ಕಟ್ಟಿದ್ದರೆ ಅಂತಹ ಮನೆಗಳನ್ನೂ ಸಹ ಕೆಡವಲು ಕ್ಯಾಬಿನೆಟ್‌ನಲ್ಲಿ ಏನಾದರೂ ತೀರ್ಮಾನ ಕೈಗೊಂಡಿದ್ದೀರಾ ?

ಶ್ರೀ ಎಂ. ಚಂದ್ರಶೇಖರ್ .—ಇದುವರೆಗೆ ಆಗಿರುವ ಬಗ್ಗೆ ವಿವರಗಳು ನಮ್ಮ ಮುಂದಿವೆ. ಇನ್ನು ಮುಂದೆ ಏನು ಮಾಡುತ್ತಾರೆಂಬುದು ಬಿ.ಡಿ.ಎ.ಗೆ ಸೇರಿದ್ದು.

ಶ್ರೀ ಪಿ. ರಾಮ್‌ದೇವ್ .—ಇಲ್ಲಿ ಮನೆಗಳನ್ನು ಕಳೆದುಕೊಂಡವರು ಪರಿಹಾರ ಕೊಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡ ಮೇಲೆ ಸರ್ಕಾರದವರು ಈ ಬಗ್ಗೆ ತನಿಖೆ ಮಾಡಿ ವರದಿ ಕೊಡಲು ರೆವೆನ್ಯೂ ಕಮೀಷ ನರ್ ಅವರಿಗೆ ತಿಳಿಸಿದ ನಂತರ ಅವರು ಸರ್ಕಾರಕ್ಕೆ ಏನೇನು ಶಿಫಾರಸ್ ಮಾಡಿದ್ದಾರೆ ಮತ್ತು ಇದರ ಮೇಲೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಮತ್ತು ಈ ವಿಷಯ ಏನಾದರೂ ಕ್ಯಾಬಿನೆಟ್ ಮುಂದೆ ಹೋಗಿದೆಯೇ ಹೇಗೆ ?

ಶ್ರೀ ಎಂ. ಚಂದ್ರಶೇಖರ್ .—ಅವರ ವರದಿಯಲ್ಲಿ ಏನು ಹೇಳಿದ್ದಾರೆಂದರೆ, ಇಲ್ಲಿ ಏನು 74 ಮನೆಗಳನ್ನು ಕೆಡವಲಾಯಿತು, ಈ ಮನೆಗಳವ ರಹತ್ತಿರ ಅದು ಅವರ ಆಸ್ತಿ ಎಂಬ ಬಗ್ಗೆ ಯಾವುದೇ ದಾಖಲೆಗಳಿಲ್ಲವೆಂದು ಮತ್ತು ಯಾವಾಗ ದಾಖಲೆಗಳು ಇಲ್ಲವೋ ಆಗ ಯಾವುದೇ ರೀತಿಯ ಪರಿಹಾರ ಕೊಡಬೇಕಾಗಿಲ್ಲವೆಂದು ಹೇಳಿದ್ದರು. ಈ ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆ.

ಶ್ರೀ ಎನ್. ಚಿಕ್ಕೇಗೌಡ .—ಈ ಚಿಕ್ಕಮಾರನಹಳ್ಳಿ ರಾಜಮಹಲ್‌ವಿಲಾಸ್ ಎರಡನೇ ಹಂತದಲ್ಲಿ ಬರು ತ್ತದೆ. ಇಲ್ಲಿ ಬಿ.ಡಿ.ಎ. ಎಷ್ಟು ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡಿದೆ ಮತ್ತು ಎಷ್ಟು ಎಕರೆ ಜಾಗವನ್ನು ಡೀ-ನೋಟಿಫೈ ಮಾಡಿದೆ ಎಂಬುದನ್ನು ತಿಳಿಸಬೇಕು. ಇಲ್ಲಿ ಮಾತ್ರ 74 ಮನೆಗಳನ್ನು ಕೆಡವಲು ಕಾರಣವೇನು ಮತ್ತು ಬೇರೆ ಕಡೆಗಳಲ್ಲಿ ಕ್ರಮ ಕೈಗೊಳ್ಳದಿರಲು ಕಾರಣವೇನು ? ಇಲ್ಲಿ ಕೆಡವಿದ ಮನೆಗಳ ಮೌಲ್ಯವನ್ನು ಅಂದಾಜು ಮಾಡಿರುವುದಿಲ್ಲವೆಂದು ಹೇಳಿದ್ದೀರಿ. ಆದರೆ ಮನೆಗಳನ್ನು ಕಳೆದುಕೊಂಡಿರುವವರು ತಮಗೆ ಆದಂಥ ಹಾನಿಯ ಬಗ್ಗೆ ಮನವಿಗಳನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಇದರ ಜೊತೆಗೆ ಬುಲ್ಡೋಜರ್ ಮೂಲಕ ಆಲ್ಲಿ ಮನೆಗಳನ್ನು ಕೆಡವತಕ್ಕಂಥ ಸಮಯದಲ್ಲಿ ಒಬ್ಬರು 6 ರಿಂದ 8 ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವಂತಹ ತಮ್ಮ ಹಸುವನ್ನು ಹೊರಗಡೆ ಕಟ್ಟುವುದಾಗಿ ಹೇಳಿದರೂ ಸಹ ಕೇಳದೆ ಅದರ ಪ್ರಾಣವನ್ನೂ ಸಹ ತೆಗೆದಿರುವುದು ನಿಜವೇ ?

ಶ್ರೀ ಎಂ. ಚಂದ್ರಶೇಖರ್ .—ಈ ಚಿಕ್ಕಮಾರನಹಳ್ಳಿ ಪ್ರದೇಶದಲ್ಲಿ ಬಿ.ಡಿ.ಎ.ಯವರು ಒಂದು ಕಡೆ 125 ಎಕರೆ 6 ಗುಂಟೆ ಜಾಗವನ್ನು ಮತ್ತು ಮತ್ತೊಂದು ಕಡೆ 45 ಎಕರೆ 8 ಗುಂಟೆ ಜಾಗವನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಇದನ್ನು ಬಿಟ್ಟು ಮಿಕ್ಕ ವಿಚಾರಗಳು ಈಗ ನನ್ನ ಬಳಿ ಇಲ್ಲ. ಆದನ್ನೆಲ್ಲಾ ತಮಗೆ ಒದಗಿಸಿ ಕೊಡುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್ .—ಇವು ಅನಧಿಕೃತ ಮನೆಗಳು ಎಂದು ತಾವು ಹೇಳಿದಿರಿ. ಆದರೆ ಸುಮಾರು ಮನೆಗಳಿಗೆ ವಿದ್ಯುತ್ ಸೌಲಭ್ಯ ಕೊಟ್ಟಿರುವುದು ನಿಜವಲ್ಲವೇ ? ಇದರ ಜೊತೆಗೆ ಆಲ್ಲಿ ತಾರಸಿ ಮನೆಗಳನ್ನು ಕಟ್ಟಿಸಲು ಕೆಲವರಿಗೆ ನಿಮ್ಮ ಅಧಿಕಾರಿಗಳು ಅನುಮತಿ ಕೊಟ್ಟು ಈಗ ಅದೇ ಮನೆಗಳನ್ನು ಕೆಡವಿಹಾಕಿದ್ದು ಸರಿಯೆ ? ಇಂತಹ ಮನೆಗಳಿಗೆ ಪರಿಹಾರ ಕೊಡುವುದಿಲ್ಲವೆಂದು ಹೇಳುವುದು ಯಾವ ನ್ಯಾಯ ? ಮನೆಗಳನ್ನು ಕಳೆದುಕೊಂಡವರಿಗೆ ತಕ್ಷಣವೇ ಪರಿಹಾರ ಕೊಡಲು ಗಮನ ಹರಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—74 ಮನೆಗಳ ಪೈಕಿ 4 ಮನೆಗಳು ಮಾತ್ರ ಆರ್.ಸಿ.ಸಿ. ಮನೆಗಳಾಗಿದ್ದವು. 24 ಮನೆಗಳು ಪಾಯದ ಹಂತದಲ್ಲಿದ್ದವು. ಯಾರೂ ಸಹ ಅನುಮತಿ ಪಡೆದು ಮನೆಗಳನ್ನು ಕಟ್ಟಿಸಿರಲಿಲ್ಲ. ಇವುಗಳಲ್ಲಿ ಎರಡು ಮನೆಗಳಿಗೆ ಮಾತ್ರ ವಿದ್ಯುತ್ ಸೌಲಭ್ಯವಿತ್ತು. ಪಂಚಾಯತಿ ಚೇರ್‌ಮನ್ ಮತ್ತು ವಿಲೇಜ್-ಅಕೌಂಟೆಂಟ್ ಅವರು ಎನ್.ಒ.ಸಿ. ಪತ್ರ ಕೊಟ್ಟಿದ್ದರಿಂದ ಕೆ.ಇ.ಬಿ.ನವರು ವಿದ್ಯುತ್ ಸೌಲಭ್ಯ ವನ್ನು ಕೊಟ್ಟಿದ್ದರು. ಯಾವಾಗ ಪ್ಲಾನ್ ಇಲ್ಲದೆ ಮತ್ತು ಅನುಮತಿ ಇಲ್ಲದೆ ಮನೆಗಳನ್ನು ಕಟ್ಟಿದ್ದರೋ ಮತ್ತು ಆ ಜಮೀನೂ ಸಹ ಅವರದ್ದು ಅಲ್ಲವಾದ ಕಾರಣ ಪರಿಹಾರ ಕೊಡುವಂತಹ ಅವಶ್ಯಕತೆ ಇಲ್ಲ ಎಂಬುದೇ ಸರ್ಕಾರದ ಅಭಿಪ್ರಾಯ.

ಶ್ರೀ ಕೆ. ಹೆಚ್. ರಂಗನಾಥ್ .—ಈ ಜಾಗದಲ್ಲಿ ಕಟ್ಟಿದ್ದ ಮನೆಗಳ ಪೈಕಿ 74 ಮನೆಗಳನ್ನು ಮಾತ್ರ ಕೆಡವಿಹಾಕಿ ಉಳಿದ ಮನೆಗಳನ್ನು ಹಾಗೆಯೇ ಬಿಡಲು ಕಾರಣವೇನು ? ಈ ಮನೆಗಳು ಆಲ್ಲಿ ಎಷ್ಟು ವರ್ಷಗಳಿಂದ ಇದ್ದವು ? ಈ ಮನೆಗಳನ್ನು ಕ್ರಮಬದ್ಧವಾಗಿ ಕಟ್ಟಿರದಿದ್ದಿರೆ ಆಲ್ಲಿ ಕಟ್ಟಿರುವಂತಹ ಎಲ್ಲ ಮನೆ ಗಳ ಬಗ್ಗೆಯೂ ಕೂಲಂಕಷವಾಗಿ ಪರಿಶೀಲನೆ ಮಾಡಿದ ನಂತರ ಮುಂದಿನ ಕ್ರಮ ಕೈಗೊಳ್ಳಲು ಸಾಧ್ಯ ವಿರಲಿಲ್ಲವೇ ?

ಶ್ರೀ ಎಂ. ಚಂದ್ರಶೇಖರ್.—ನಾನು ಮೊದಲೇ ಹೇಳಿದಂತೆ ಅಲ್ಲಿ ಒಂದೆರಡು ಮನೆಗಳಿಗೆ ಮಾತ್ರ ಕ್ರಮಬದ್ಧವಾದ ಅನುಮತಿ ಕೊಟ್ಟಿದ್ದಾರೆ. ಇನ್ನುಳಿದ ಮನೆಗಳಿಗೆ ಸಂಬಂಧಪಟ್ಟಂತೆ ಪಂಚಾಯಿತಿ ಅವರಾಗಲೀ ಬಿ.ಡಿ.ಎ.ನವರಾಗಲೀ ಯಾವುದೇ ರೀತಿಯ ಅನುಮತಿಯನ್ನು ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಎಷ್ಟು ವರ್ಷಗಳಿಂದ ಈ ಮನೆಗಳು ಅಲ್ಲಿದ್ದವು?

ಶ್ರೀ ಎಂ ಚಂದ್ರಶೇಖರ್.—ಕೆಲವು ಮನೆಗಳನ್ನು ಹೋದ ವರ್ಷ ಕಟ್ಟಿದ್ದು. ಕಳೆದ ನವಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಹೆಚ್ಚಾಗಿ ಅಲ್ಲಿ ಮನೆಗಳಾದವು.

ಶ್ರೀ ಧರ್ಮಸಿಂಗ್.—ಈ ಮನೆಗಳನ್ನು ಕೆಡವಿಹಾಕುವಾಗ ಈ ಮಾನ್ಯ ಮಂತ್ರಿಗಳು ಗುಲ್ಬರ್ಗದಲ್ಲಿ ಪ್ರವಾಸ ಮಾಡುತ್ತಿದ್ದರು. ಈ ಮನೆಗಳನ್ನು ಕೆಡವಿಹಾಕಿದ್ದು ಸರಿ ಎಂದು ಈ ಮಂತ್ರಿಗಳು ಹೇಳಿಕೆ ಕೊಟ್ಟರೆ ಮಾನ್ಯ ರಘುಪತಿಯವರು ಕೆಡವಿಹಾಕಿದ್ದು ತಪ್ಪು ಎಂದು ಹೇಳಿಕೆ ಕೊಟ್ಟಿದ್ದಾರೆ. ಇದರಿಂದ ಇದು ಕಾಂಟ್ರವರ್ಸಿಯಲ್ ಇಷ್ಯೂ ಆಗಿದೆ. ಬೆಂಗಳೂರು ನಗರದಲ್ಲಿ ಅನೇಕ ಕಡೆಗಳಲ್ಲಿ ಅನುಮತಿ ಇಲ್ಲದೆ ಎಷ್ಟೋ ಜನರು ಮನೆಗಳನ್ನು ಕಟ್ಟಿಸಿದ್ದಾರೆ. ಇಲ್ಲಿ ಮನೆಗಳನ್ನು ಕೆಡವಿಹಾಕಿದ ನಂತರ ಜನರು ಪ್ರತಿಭಟನೆ ಮಾಡಿದರೆಂಬ ಕಾರಣದಿಂದ ಬೇರೆ ಕೆಡವಿಹಾಕುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ನಿಮ್ಮ ಕಾಲದಲ್ಲಿ ಆಗಿಲ್ಲವೇ?

ಶ್ರೀ ಧರ್ಮಸಿಂಗ್.—ನಮ್ಮ ಕಾಲದಲ್ಲಿ ಆಗಿಲ್ಲ. ಅನುಮತಿ ಇಲ್ಲದೆ ಇಷ್ಟೊಂದು ಮನೆಗಳು ಆಗಿರುವುದಕ್ಕೆ ಯಾರು ಕಾರಣರು? ಇದರ ಬಗ್ಗೆ ಇಲ್ಲಿ ವಿವರವಾದಂಥ ಚರ್ಚೆ ಆಗಬೇಕಾಗಿದೆ. ಆದ್ದರಿಂದ ತಾವು ಇದಕ್ಕೆ ಪ್ರತ್ಯೇಕವಾದಂಥ ಸಮಯ ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇದಕ್ಕೆ ಪ್ರತ್ಯೇಕವಾದ ಚರ್ಚೆ ಆಗಬೇಕೆಂದು ಹೇಳಿದ್ದಾರೆ. ಇದನ್ನು ಆಲೋಚನೆ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರತ್ಯೇಕವಾದ ಚರ್ಚೆಗೆ ಅವಕಾಶ ಆಗುವುದಿಲ್ಲವೆಂದು ತಾವು ನಮಗೆ ಉತ್ತರ ಬರೆದಿದ್ದೀರಿ.

ಅಧ್ಯಕ್ಷರು.—ಈಗ ಸದನದಲ್ಲಿ ಹೇಳುತ್ತಿದ್ದೇನೆ, ಅವಕಾಶ ಮಾಡಿಕೊಡುತ್ತೇನೆ.

ವಿಷಯ: ರಾಜ್ಯದಲ್ಲಿರುವ ಗ್ರಾಮಲೆಕ್ಕಿಗರ ಸಂಖ್ಯೆ.

ಪ್ರ. 245 (198) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ನಮ್ಮ ರಾಜ್ಯದಲ್ಲಿರುವ ಗ್ರಾಮಲೆಕ್ಕಾಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಅವರಿಗೆ ಪ್ರತಿ ತಿಂಗಳೂ ಕೊಡುತ್ತಿರುವ ಸಂಬಳವೆಷ್ಟು?

ಶ್ರೀ ಎ. ಲಕ್ಷ್ಮೀಸಾಗರ್ (ಕಂದಾಯ ಮಂತ್ರಿಗಳ ಪರವಾಗಿ).—

8,031 ಗ್ರಾಮಲೆಕ್ಕಿಗರು ಈ ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ, ಮಾಹೆಯಾನ 59,57,406·73 ರೂ.ಗಳನ್ನು ಅವರ ಸಂಬಳ, ಸಾರಿಗೆ ಬಗ್ಗೆ ಖರ್ಚು ಮಾಡಲಾಗುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ 8,031 ಜನ ಗ್ರಾಮಲೆಕ್ಕಿಗರಿದ್ದು ಅವರಿಗೆ ಮಾಹೆಯಾನ 59 ಲಕ್ಷದ 57 ಸಾವಿರದ 406·73 ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆದರೆ ಗ್ರಾಮಲೆಕ್ಕಿಗರು ಎಲ್ಲಿರುತ್ತಾರೆಂಬುದು ಯಾರಿಗೂ ಗೊತ್ತಿರುವುದಿಲ್ಲ. ತಹಶೀಲ್ದಾರ್‌ರವರಿಗೂ ಸಹ ಅವರು ಎಲ್ಲಿರುತ್ತಾರೆಂಬುದು ಗೊತ್ತಾಗುವುದಿಲ್ಲ. 1 ತಿಂಗಳಿನಲ್ಲಿ 15 ದಿವಸ ರಜ ಹಾಕಿ ಊರುಗಳಿಗೆ ಹೋಗಿರುತ್ತಾರೆ. ಹಿಂದೆ ಗ್ರಾಮಲೆಕ್ಕಿಗರು ಹಳ್ಳಿಗಳಲ್ಲೇ ಇರಬೇಕೆಂದು ಸರ್ಕಾರೀ ಆದೇಶ ಹೊರಡಿಸಲಾಗಿತ್ತು. ಈಗ ಸರ್ಕಾರ ಗ್ರಾಮಲೆಕ್ಕಿಗರು ಹಳ್ಳಿಯ ರೈತರಿಗೆ ಬೇಗ ಸಿಗುವ ವ್ಯವಸ್ಥೆಯನ್ನು ಮಾಡುತ್ತದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಗ್ರಾಮಲೆಕ್ಕಿಗರು ಹಳ್ಳಿಗಳಲ್ಲಿ ಇರುವುದಿಲ್ಲ ಎನ್ನುವ ದೂರುಗಳು ಬಂದಿವೆ. ಅದರ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಗ್ರಾಮಲೆಕ್ಕಿಗರಿಗೆ ಸುಮಾರು ಏಳೆಂಟು ಹಳ್ಳಿಗಳು ಸೇರಿರುತ್ತವೆ. ಅವರು ಸರಿಯಾದ ರೀತಿಯಲ್ಲಿ ಕೆಲಸಮಾಡುವಂತೆ ನೋಡಿಕೊಳ್ಳಲು ತಹಶೀಲ್ದಾರ್‌ರವರಿಗೆ ಆದೇಶ ಹೊರಡಿಸಿ. ಅವರಿಗಾಗಿ ಸುಮಾರು 60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ, ಅದು ಸಾರ್ಥಕವಾಗುವಂತೆ ಮತ್ತು ಅವರಿಂದ ರೈತರಿಗೆ ಅನುಕೂಲವಾಗುವಂತೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ವ್ಯವಸ್ಥೆ ಮಾಡೋಣ.

MR. SPEAKER.—The question hour is over.